ಯಾವುದೇ ನಿರ್ಣಯಕ್ಕಾದರೂ ಹೊತ್ತುಗೊತ್ತು ಕೂಡಿ ಬರಲೇಬೇಕಷ್ಟೆ? ಪುಣ್ಯವಶಾತ್, ಸುಮುಹೂರ್ತವೊಂದು ತಂತಾನೇ ಒದಗಿಬಂತು. ಒದ್ದೊದ್ದುಕೊಂಡು ಬಂತು. ಅವೊತ್ತು ಮಧ್ಯಾಹ್ನ ಒಂದು ಮುಖ್ಯವಾದ ಮೀಟಿಂಗಿನ ತಯಾರಿಯಲ್ಲಿರುವಾಗ, ಅದೇ ಕ್ಲಯಂಟಿನ ಕಡೆಯಿಂದ ಫೋನು ಬಂತು: 'ಅಭಿಜಿತ್, ನಿಮ್ಮ ಪೀಆರ್ ಕಡೆಯಿಂದ ಬಂದಿರೋ ಮೇಲ್ ನೋಡಿದೀರೇನ್ರಿ? ಇಟ್ಸ್ ಅಗ್ರೆಸಿವ್ಲೀ ವಲ್ಗರ್...' ಕ್ಲಯಂಟು ಬಲು ಖಾರವಾಗಿ ಆಡಿಬಿಟ್ಟ. 'ಯ್ಯ್... ಯಾಕೆ? ಏನಾಯಿತು?' ಎಂದು ಕೇಳುವ ನಡುವೆಯೇ, ಮೇಲ್‌ಬಾಕ್ಸ್ ತೆರೆದು ನೋಡಿದೆ. ಕುಣಾಲಿ ಕಳಿಸಿದ – **'please attain the mating without fail'** ಎಂದು ಬರೆದ ಒಕ್ಕಣೆ ದೊರಕಿತು! ಹೌಹಾರಿಹೋದೆ!!

ಕ್ಲಯಂಟು ನನ್ನ ಮುಂದಿನ ಮಾತಿಗೆ ಕಾಯದೆ ಫೋನು ಬಡಿಚಿದ್ದ.

ಅವೊತ್ತೇ, ಆಗಿಂದಾಗಲೇ – ಕುಣಾಲಿಯನ್ನು ಆಫೀಸಿನಿಂದ ಹೊರಡಹೇಳಿದೆ.

## *(ii)*

ಕುಣಾಲಿ, ಇದಾದ ಬಳಿಕವೂ ಒಂದೆರಡು ಸರ್ತಿ ನನ್ನನ್ನು ಭೇಟಿ ಮಾಡಿದ್ದಳು. ಬೇರೆಯದೇ ಕಾರಣಕ್ಕೆ. ಈಗಲೂ, ಆಗೊಮ್ಮೆ ಈಗೊಮ್ಮೆ ಮೆಸೇಜು ಮಾಡುವುದಿದೆ. 'ನಿಮ್ಮನ್ನು ಕಾಣಬೇಕು... ಮಾತಾಡೋದಿದೆ...' ಎಂದೆಲ್ಲ ಬರೆಯುವುದಿದೆ. ನನ್ನ ಕೆಲಸಕ್ಕೆ ಆಗಿಬರದ ಇವಳೊಡನೇನು ಮರ್ಜಿ ಅಂದುಕೊಂಡು ಸೊಪ್ಪು ಹಾಕದಿದ್ದರೂ, ಆಗಾಗ ಮುಲಾಜು ತೋರುವುದಾಗುವುದು. ಹತ್ತು ಮೆಸೇಜಿಗೊಂದಕ್ಕೆನ್ನುವ ಹಾಗೆ, ಉದಾಸದಿಂದ ಉತ್ತರಿಸುವುದಾಗುವುದು. ಇಷ್ಟಕ್ಕು, ನನ್ನ ಅವಳ ನಡುವೆ ಖಾಸಗಿಯಾದುದೇನು ತಾನೇ ಇರಲು ಸಾಧ್ಯ?

ಈಗ ನೆನಪಿರುವ ಹಾಗೆ, ಕುಣಾಲಿ ನನ್ನೊಡನೆ ಕೆಲಸಕ್ಕಿರುವಾಗಲೇ ತನ್ನ ಬಾಯ್‌ಫ್ರೆಂಡ್ ಆಗ್ನೇಯನನ್ನೊಮ್ಮೆ ಆಫೀಸಿಗೆ ಕರೆತಂದಿದ್ದಳು. ತೀರಾ ಪ್ರಿಯಕರನೆಂದು ಪರಿಚಯಿಸದಿದ್ದರೂ, ನನ್ನೆದುರು ಕುಳಿತ ಇವನ ಹಿಂದೆ ನಿಂತು ನಲಿಯುತ್ತಿದ್ದ ಇವಳ ಖಾಸುಖಾಸನೆ ಹಾವಭಾವದಿಂದಲೇ, ಇವನು ನಲ್ಲನೇ ಎಂದು ಖಾತ್ರಿಯಾಗಿತ್ತು!

ಆಗ್ನೇಯ, ಈ ಶಹರದಲ್ಲಿ ಬಲು ಹೆಸರಾಗಿರುವ 'ಕ್ರೀಮೀ ಸ್ಪಾಂಜ್' ಅಂತೆಂಬ ಕೇಕುಗಳ ಬ್ರ್ಯಾಂಡಿನವರಿಗೆ ಸಂಬಂಧಿತ ಹುಡುಗನಂತೆ... ಮಹಾನಗರದ ಎಲ್ಲ ಬಡಾವಣೆಗಳಲ್ಲಿಯೂ ಈ 'ಕ್ರೀಮೀ ಸ್ಪಾಂಜ್'ನ ಔಟ್ಲೆಟ್ಟುಗಳಿವೆ. ಬೆಂಗಳೂರಿನಿಂದ ಮೈಸೂರಿನವರೆಗಿನ ಹೆದ್ದಾರಿಯಲ್ಲಿಯೂ ಇವರದೇ ಮೂರ್ನಾಕು ಕೆಫೆಗಳಿವೆ. ಮೈಸೂರು, ತುಮಕೂರುಗಳಲ್ಲಿಯೂ ಒಂದೆರಡಿವೆ. ರಾಜಧಾನಿಯಿಂದ ಹೊರಸಾಗುವ ಉಳಿದ ಹೈವೇಗಳಲ್ಲಿಯೂ ಇವೆಯೆಂದು ಕೇಳಪಟ್ಟಿದ್ದೇನೆ. ಒಂದು ಕಾಲಕ್ಕೆ ಕರ್ನಾಟಕದಲ್ಲೆಲ್ಲೂ, ಹಾಸನ ಸೀಮೆಯ ಐಯಂಗಾರ್ ಮಂದಿ ಬೇಕರಿ ಇಟ್ಟಿರಲಿಲ್ಲವೆ, ಅಂತಹ ಕುಲದ ಜನ. ಬ್ರಿಟಿಷರ ಕಾಲಕ್ಕೆ ಅವರೊಡನೆ 'ಜೈವಿಕ'ವಾಗಿ ಮೈ–ವ್ಯವಹರಿಸಿದ್ದರಿಂದ, ಕುಲಾಂತರಿ ಮಂದಿಯೆಂತಲೂ ಪ್ರತೀತಿಯಿದೆ! ಈಗ್ಗೆ ಇಪ್ಪತ್ತಿಪ್ಪತ್ತೈದು ವರ್ಷಗಳ ಹಿಂದೆ, ಈ ಬೆಂಗಳೂರಿನಲ್ಲಿನ ಇಂಥದೊಂದು ಕುಟುಂಬವು, ಬಲುಕಾಲದಿಂದ ನಡೆಸುತ್ತಿದ್ದ 'ಐಯಂಗಾರ್ಸ್ ಬೇಕರಿ' ಎಂಬುದನ್ನು ಕೈಬಿಟ್ಟು – ಝೋಕಾಗಿ 'ಕ್ರೀಮೀ ಸ್ಪಾಂಜ್' ಎಂಬ ಗತ್ತಿನ ಹೆಸರು ಕೊಟ್ಟೇ ಕೊಟ್ಟಿದ್ದಷ್ಟೆ, ಕ್ಲಿಕ್ಕಾಗಿಬಿಟ್ಟಿತು! ಅದೇ ಹೊತ್ತಿಗೆ ವಿದೇಶೀ ಬಂಡವಾಳವೂ ಕೈಗೂಡಿಕೊಂಡು, ದೊಡ್ಡ ಉದ್ದಿಮೆಯಾಗಿ ಬೆಳೆದುಬಿಟ್ಟಿತು. ಇವೊತ್ತು, ಕಡಿಮೆಯೆಂದರೂ